ಓ.ಎಸ್.ನಂ.48-2012
ಪಿ.ಡಬ್ಲು-೧

ದಿ:16-08-2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : 3ನೇ ಪ್ರತಿವಾದಿ ಪರವಾಗಿ ಶ್ರೀಯುತ ಕೆ.ಎಂ.ಡಿ. ವಕೀಲರಿಂದ.**

7. ನಿಪಿ.13 ಮತ್ತು 14 ರಲ್ಲಿ ಮೇಘನಾ ಚಂದ್ರಾ ರೆಡ್ಡಿ, ವಿಕ್ಕಿ ಥಾಮಸ್ ಮತ್ತು ರಿಕ್ಕಿ ಥಾಮಸ್ ರವರು ಸದರಿ ಪತ್ರದಲ್ಲಿ ಕಾಣಿಸಿರುವ ಆಸ್ತಿಯ ಹಕ್ಕುದಾರರು ಎಂದು ಕಾಣಿಸಿರುತ್ತೇವೆ ಎಂದರೆ ಸರಿ. ನಿಪಿ.13 ಮತ್ತು 14 ನ್ನು ಬರೆದುಕೊಟ್ಟಿರುವ ಮುನಿನಾರಾಯಣಪ್ಪ ಮತ್ತು ಇತರರು ಪ್ರಸ್ತುತ ದಾವೆಯ ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸರಿ. ನಿಪಿ.13 ಮತ್ತು 14 ರಲ್ಲಿ ಮುನಿನಾರಾಯಣಪ್ಪ ಮತ್ತು ಇತರರಿಗೆ ಹಣ ಸಂದಾಯ ಮಾಡಲಾಗಿರುತ್ತದೆ ಎಂದರೆ ಸರಿ. ನಮ್ಮ ತಂದೆ ಈ ಹಿಂದೆ ನಿಪಿ.13 ಮತ್ತು 14 ರಲ್ಲಿರುವ ಆಸ್ತಿಗಳನ್ನು ಮೇಘನಾ ಚಂದ್ರಾ ರೆಡ್ಡಿ, ವಿಕ್ಕಿ ಥಾಮಸ್ ಮತ್ತು ರಿಕ್ಕಿ ಥಾಮಸ್ ರವರಿಗೆ ಮಾರಾಟ ಮಾಡಿದ್ದು ಮತ್ತು ಪುನ: ಹೆಚ್ಚಗಿನ ಹಣ ಪಡೆದುಕೊಂಡು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.13 ಮತ್ತು 14 ದಾಖಲೆಗಳನ್ನು ಮೇಘನಾ ಚಂದ್ರಾ ರೆಡ್ಡಿ, ವಿಕ್ಕಿ ಥಾಮಸ್ ಮತ್ತು ರಿಕ್ಕಿ ಥಾಮಸ್ ರವರಿಂದ ಹೆಚ್ಚಗಿನ ಹಣವನ್ನು ಪಡೆದುಕೊಂಡು ಬರೆದುಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ೩ನೇ ಪ್ರತಿವಾದಿಯ ವಿರುದ್ದ ಸುಳ್ಳಾಗಿ ದಾಖಲೆ ಬರೆದುಕೊಂಡಿರುತ್ತಾರೆ ಎಂದು ಪಿರ್ಯಾದನ್ನು ನೀಡಿದ್ದೆ ಎಂದರೆ ಸರಿ. ಸದರಿ ಪಿರ್ಯಾದಿನ ಮೇರೆಗೆ ಬಿ ಅಂತಿಮ ವರದಿಯನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಬಿ ಅಂತಿಮ ವರದಿಯನ್ನು ಪ್ರಶ್ನಿಸಿರುತ್ತೇನೆ. ಸದರಿ ಬಿ ಅಂತಿಮ ವರದಿಯನ್ನು ಪ್ರಸ್ತುತ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ. ಆ ರೀತಿ ನಾನು ನೀಡಿದ ಪಿರ್ಯಾದಿಗೆ ಸಲ್ಲಿಸಿದ್ದ ಬಿ ಅಂತಿಮ ವರದಿಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ೧ ಹಾಗೂ ೨ನೇ ಪ್ರತಿವಾದಿಗಳ ನಡುವೆ ಯಾವುದೇ ಕೌಟುಂಬಿಕ ಸಂಬಂಧ ಇರುವುದಿಲ್ಲ. ದಾವಾ ಜಮೀನ್ನನ್ನು 1 ಮತ್ತು 2ನೇ ಪ್ರತಿವಾದಿಗಳಿಗೆ ಮಂಜೂರು ಮಾಡಲಾಗಿರುತ್ತದೆ. ನನ್ನ ತಂದೆಯ ತಾಯಿಯ ಹೆಸರು ಮುತ್ಯಾಲಮ್ಮ ಇರುತ್ತದೆ. ನನ್ನ ಅಜ್ಜಿ ಮುತ್ಯಾಲಮ್ಮ ರವರ ಗಂಡನ ಹೆಸರು ಮುನಿತಾಯಪ್ಪ ಇರುತ್ತದೆ. ೧ ಮತ್ತು ೨ನೇ ಪ್ರತಿವಾದಿಗಳು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದವರಾಗಿರುವುದಿಲ್ಲ ಎಂದರೆ ಸರಿ. ಸದರಿ ೧ ಮತ್ತು ೨ನೇ ಪ್ರತಿವಾದಿಗಳಿಗೆ ಪ್ರತ್ಯೇಕವಾಗಿ ಭೂಮಿಯನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.3 ರಂತೆ ನಾರಾಯಣಪ್ಪ ಬಿನ್ ಗಂಗಪ್ಪ, ಮುತ್ಯಾಲಮ್ಮ ಬಿನ್ ಮುತ್ಯಾಲಪ್ಪ, ನರಸಿಂಹಯ್ಯ ಬಿನ್ ಮುನಿಗ, ಅಪ್ಪಣ್ಣ ಬಿನ್ ರಾಯಪ್ಪ, ವೆಂಕಟರಮಣಪ್ಪ ಬಿನ್ ದೊಣ್ಣಪ್ಪ ಮತ್ತು ಜಯರಾಮ್ ಬಿನ್ ದೊಡ್ಡರಾಮಯ್ಯರವರಿಗೆ ಇನಾಮ್ತಿ ಮೂಲಕ ದಾವಾ ಜಮೀನ್ನನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ.

9. ನನ್ನ ತಾತನ ಹೆಸರು ಮುನಿತಾಯಪ್ಪ ಇರುತ್ತದೆ. ಸದರಿ ಮುನಿತಾಯಪ್ಪ ರವರ ತಂದೆ ಹೆಸರು ಚಿನ್ನಪನ್ನೀಗ ಇರುತ್ತದೆ. ನಮಗೆ ಭೂ ನ್ಯಾಯ ಮಂಡಳಿಯಿಂದ ಜಮೀನು ಮಂಜೂರು ಆದಾಗ ಸಮಾನವಾಗಿ ಮಂಜೂರು ಮಾಡಲಾಗಿರುತ್ತದೆ ಎಂದರೆ ಸರಿ. ನಾವು ಗುಳ್ಳೆಮುನಿಗನಿಗೆ ಸಂಬಂಧಿಸಿದ ಆಸ್ತಿಯನ್ನು ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ. ೧ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಗಳಿಗೆ ಮತ್ತು ನಮಗೆ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ೪ನೇ ಪ್ರತಿವಾದಿದಾರನ್ನನ್ನು ಒಬ್ಬ ಪಾಲುದಾರನಾಗಿ ಪ್ರಸ್ತುತ ದಾವೆಯಲ್ಲಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

Case called out.

The Manager of the plaintiff bank is present.

The Manager of the plaintiff bank files affidavit in lieu of examination in chief and examined as P.W.1 and got marked Ex.P.1 to 4.

On the other hand, defendant placed exparte.

The counsel for the plaintiff submits no further evidence.

Heard arguments.

For judgment by 12.08.2025..

**Prl. Civil Judge & JMFC., Hosakote**